ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಸನ್ಮಾನ್ಯ ಸಭಾಧ್ಯಕ್ಷರೆ, ಪಿ.ಡಬ್ಲ್ಯೂ.ಡಿ. ಜೊತೆಗೆ ಮಿಕ್ಸ್ ಮಾಡಿದ್ದಾನೆ. ಈಗಾಗಲೇ ನನ್ನ ಕ್ಷೇತ್ರದಲ್ಲಿ ಸುಮಾರು ಒಂಬತ್ತು ಲಿಫ್ಟ್ ಇರಿಗೇಷನ್‌ಗಳು ಇದ್ದು, ರಿಪೇರಿ ಮಾಡುತ್ತಿಲ್ಲ, ಅವು ಕೆಲಸ ಮಾಡುತ್ತಿಲ್ಲ. ಪ್ರತ್ಯೇಕವಾದ ಡಿವಿಜನ್ ಇಲ್ಲ. ತೀರ್ಥಹಳ್ಳಿ ಇರುವುದು ಎಲ್ಲಿ ಚಿತ್ರದುರ್ಗ ಇರುವುದು ಎಲ್ಲಿ ಚಿತ್ರದುರ್ಗದ ಎಕ್ಸಿಕ್ಯೂಟೀವ್ ಇಂಜಿನಿಯರ್ ತೀರ್ಥಹಳ್ಳಿಗೆ ಬಂದು ನೋಡುವುದು ಕಷ್ಟವಾಗುತ್ತದೆ. ನೋಡುವ ಹಾಗೂ ಇಲ್ಲ. ಒಟ್ಟಾರೆ ಅದರಲ್ಲಿ ಲಕ್ಷಾಂತರ ಹಣ ಖರ್ಚು ಮಾಡಿದ್ದಾರೆ.

ಶ್ರೀ ಸಿ.ಎಂ. ಉದಾಸಿ: ಸನ್ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ 59 ನೀರಾವರಿ ಉಪ ವಿಭಾಗ ಮಾಡಬೇಕೆಂದು ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ನೀರಾವರಿ ಇಲಾಖೆ ಪರಿವರ್ತನೆಯಲ್ಲಿ ಇದ್ದಾಗ ಅನೇಕ ಜಿಲ್ಲೆಗಳಲ್ಲಿ ಸಮಸ್ಯೆಗಳಾಗುತ್ತಿದೆ. ಸಿ.ಅಂಡ್.ಬಿ. ಇಲಾಖೆಯನ್ನು ನೀರಾವರಿ ಇಲಾಖೆಯ ಉಪ ವಿಭಾಗಗಳಾಗಿ ಪರಿವರ್ತನೆ ಮಾಡುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಮತ್ತು ಅಲ್ಲಿ ಕೆಲಸ ಕಾರ್ಯಗಳಿಗೂ ತೊಂದರೆಯಾಗುತ್ತಿದೆ ಎಂದು ಹೇಳಿದಾಗ, ನೀರಾವರಿ ಕೆಲಸಗಳನ್ನು ನೋಡಿಕೊಂಡು ಅಲ್ಲಿರತಕ್ಕಂತಹ ಕೆಲಸಗಳ ಆಧಾರದ ಮೇಲೆ ನೀರಾವರಿಯನ್ನು ಗಮನದಲ್ಲಿಟ್ಟುಕೊಂಡು ಇವತ್ತು 59 ಸಬ್ ಡಿವಿಷನ್‌ಗಳನ್ನು ಮಾಡಲಿಕ್ಕಾಗಿದೆ. ಲೋಕೋಪಯೋಗಿ ಇಲಾಖೆ ಸಬ್ ಡಿವಿಷನ್ ಆಗಿ ಪರಿವರ್ತನೆ ಮಾಡಲೇ ಬೇಕೆಂದು ತೀರ್ಮಾನಕ್ಕೆ ಬಂದಿರುವುದು. ಈ ಮಧ್ಯೆ ನಾನು ಹೇಳುವುದು ಮೊದಲು ತೀರ್ಮಾನವಾದ ಹಾಗೆ ಎಂಟು ಸಬ್ ಡಿವಿಷನ್‌ಗಳನ್ನು ಮಾಡಲಾಗಿದೆ. ಮದ್ದೂರು, ಅರಕಲಗೂಡು, ಬೇಲೂರು, ಅರಸೀಕೆರೆ ಇನ್ನಿತರ ಪ್ರದೇಶಗಳಲ್ಲಿ ಎಂಟು ಉಪ ವಿಭಾಗಗಳನ್ನು ಮಾತ್ರ ನೀರಾವರಿ ಇಲಾಖೆಯಲ್ಲಿ ಕಾರ್ಯಗತ ಮಾಡಿದ್ದರು. ಅದಕ್ಕಾಗಿ ಅದು ಇಲ್ಲಿಂದ ಪರಿವರ್ತನೆ ಆಗುವುದಕ್ಕೆ ವಿಳಂಬವಾಗಿದೆ. ಇದರ ಬಗ್ಗೆ ಮರುಪರಿಶೀಲನೆ ಇರುವುದರಿಂದ ಇಲ್ಲಿ ಮೊದಲು ಇದ್ದಂತಹ ಎಲ್ಲಾ ಕ್ಷೇತ್ರಗಳಲ್ಲಿ ಸಿ.ಅಂಡ್ ಬಿ ಉಪ ವಿಭಾಗಗಳು ಮುಂದುವರೆಯುತ್ತವೆ. ಮತ್ತು ಎಲ್ಲಾ ನೀರಾವರಿಯ ಕೆಲಸ ಕಾರ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಿಲ್ಲ, ಅದರ ಗಾಂಭೀರ್ಯತೆಯನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಭಾಗಗಳಿಗೂ ಸರಿಯಾದ ರೀತಿಯಿಂದ ಉಸ್ತುವಾರಿ ನೋಡಿಕೊಳ್ಳುವ ವಿಭಾಗಗಳನ್ನು ರಚಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು: ಲೋಕೋಪಯೋಗಿ ಇಲಾಖೆಯ ಉಪ ವಿಭಾಗವನ್ನು ಎಲ್ಲಾ ಕಡೆ ಮುಂದುವರೆಸುತ್ತೇವೆ, ಹಳ್ಳಿಗಳಲ್ಲಿ ಇದರ ಸಮಸ್ಯೆ ಸಾಕಷ್ಟು ಇದೆ. ಶ್ರೀ ಜ್ಞಾನೇಂದ್ರರವರು ಪ್ರಸ್ತಾವ ಮಾಡಿದ ವಿಚಾರದ ಜೊತೆ ಜೊತೆಗೆ ಎಲ್ಲಿ ಸಣ್ಣ ನೀರಾವರಿಯ ಕೆಲಸಗಳು ಹೆಚ್ಚಿಗೆ ಇರುತ್ತವೆ, ಅದರ ಆಧ್ಯತೆಯನ್ನು ಗಾಂಭೀರ್ಯವನ್ನು ಗಮನಿಸಿ ಉಪ ವಿಭಾಗ ಕೂಡ ಮಾಡುತ್ತೇವೆಂದು ಹೇಳಿದರು. ಎಲ್ಲಾ ಪ್ರಬ್ಲಮ್ ಸಾಲ್ವ್ ಮಾಡಿದರು.

(ಈ) ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಆಗಿರುವ ಅವ್ಯವಹಾರಗಳು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: (ಬಾಗೇಪಲ್ಲಿ) ಸನ್ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ತಾವು ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಆಗತಕ್ಕಂತಹ ಅವ್ಯವಹಾರ ಮತ್ತು ಅನಾನುಕೂಲಗಳ ಬಗ್ಗೆ ಸಾಕಷ್ಟು ಈ ಸಮಯದಲ್ಲಿ

ಚರ್ಚೆಯಾಯಿತು. ಈ ಸದನದಲ್ಲಿ ಮೂರು ಆಶ್ವಾಸನೆಗಳನ್ನು ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಕೊಟ್ಟಿದ್ದರು. ಅದರಲ್ಲಿ ಬಂದಂತಹ ಮುಖ್ಯವಾದ ಸಲಹೆ ಏನೆಂದರೆ, ಖಾಸಗಿಯವರಿಗೆ ಕೊಡುವಂತಹ ನೀತಿಯನ್ನು ಬದಲಾಯಿಸಿ ಸೊಸೈಟಿಗಳ ಮುಖಾಂತರ ವಿತರಣೆ ಮಾಡಲಿಕ್ಕೆ ವ್ಯವಸ್ಥೆ ಮಾಡಬೇಕೆಂದು ಪ್ರಸ್ತಾವನೆಯಲ್ಲಿ ಕೊಟ್ಟಂತಹ ಆಶ್ವಾಸನೆ ಆ ಆಶ್ವಾಸನೆ ಇದುವರೆಗೆ ಈಡೇರಲಿಲ್ಲ. ಎರಡನೆಯದು ಆ ಸಾರ್ವಜನಿಕ ವಿತರಣಾ ವ್ಯವಸ್ಥೆ ಇಡೀ ರಾಜ್ಯದಲ್ಲಿ ಸಂಪೂರ್ಣವಾಗಿ ಹದಗೆಟ್ಟು ಹೋಗಿದೆ. ಸರ್ಕಾರ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಸಾರ್ವಜನಿಕರಿಗೆ ಕಡಿಮೆ ಬೆಲೆಯಲ್ಲಿ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುವುದಕ್ಕೆ ಎಂದು ಕೊಟ್ಟಿರತಕ್ಕಂಥದ್ದು ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿದೆ. ಸರಿಯಾದ ರೀತಿಯಲ್ಲಿ ವಿತರಣೆಯಾಗುತ್ತಿಲ್ಲ ಮೂರನೇ ಅಂಶ ಖಾಸಗಿಯವರು ಫೇರ್ ಪ್ರೈಸ್ ಡಿಪೋ ಏನು ಹಾಕಿಕೊಂಡಿದ್ದಾರೆ, ಅರ್ಧ ಭಾಗವನ್ನು ಅವರು ಅಲ್ಲೇ ಮಾರಾಟ ಮಾಡಿಕೊಂಡು ಹೋಗುತ್ತಿದ್ದಾರೆ. ಅವರು ಸಾರ್ವಜನಿಕರಿಗೆ ಮಾರುವ ಪ್ರಶ್ನೆ ಇಲ್ಲ. ಇದರ ಜೊತೆಗೆ ಪ್ರತ್ಯೇಕವಾಗಿ ನನ್ನ ಕೋಲಾರ ಜಿಲ್ಲೆಯಲ್ಲಿ ಎಂತಹ ಪರಿಸ್ಥಿತಿ ಬಂದಿದೆ ಎಂದರೆ, ಅಲ್ಲಿನ ಜಿಲ್ಲಾಧಿಕಾರಿಗಳು ಒಂದು ಆರ್ಡ್ಲ್ ಮಾಡಿದ್ದಾರೆ, 15ನೇ ತಾರೀಖಿನ ಒಳಗೆ ಯಾರು ಡಿ.ಡಿ. ಕಟ್ಟುವುದಿಲ್ಲ ಅವರಿಗೆ ಲಿಫ್ಟ್ ಮಾಡಬೇಡಿ ಎಂದು ಆರ್ಡ್ಲ್ ಹೊಂದಿಸಿದ್ದಾರೆ. ಪರ್ಯಾಯ ವ್ಯವಸ್ಥೆ ಇಲ್ಲದೆ ಲಿಫ್ಟ್ ಮಾಡುವ ಹಾಗಿಲ್ಲ. ಇಂತಹ ಪರಿಸ್ಥಿತಿ ಬಂದಿದೆ. ಆಶ್ವಾಸನೆಕೊಟ್ಟ ಮಂತ್ರಿಗಳು ಇದರ ಬಗ್ಗೆ ಇದುವರೆಗೆ ಏನೂ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದ ಇಡೀ ಸಾರ್ವಜನಿಕ ವಿತರಣಾ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ಸಾಮಾನ್ಯರಿಗೆ, ಬಡ ಜನರಿಗೆ ಕಡಿಮೆ ಬೆಲೆಯಲ್ಲಿ ಆಹಾರಧಾನ್ಯಗಳು ಸಿಗುತ್ತಿಲ್ಲ. ಅದಕ್ಕೆ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು, ಅದನ್ನು ಇವತ್ತು ತೆಗೆದುಕೊಂಡಿಲ್ಲ. ಏಕೆ ಎಂದು ನಾನು ಕೇಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಈ ಸಭೆಯಲ್ಲಿ ತಮ್ಮ ಆದೇಶದ ಮೇಲೆ ಸನಿಸ್ತಾರವಾಗಿ ಚರ್ಚೆ ನಡೆಯಿತು. ಅವರು ಈ ಮನೆಯ ಕೆಲವು ಸದಸ್ಯರು ಖಾಸಗಿ ನ್ಯಾಯ ಬೆಲೆ ಅಂಗಡಿಗಳನ್ನು ರದ್ದು ಮಾಡಿ ಸಂಪೂರ್ಣವಾಗಿ ಸರಕಾರ ಸಂಘಗಳಿಗೆ ವಿತರಣಾ ವ್ಯವಸ್ಥೆಯ ಜವಾಬ್ದಾರಿಯನ್ನು ಕೊಡಬೇಕೆಂದು ತಾವು ಆದೇಶ ನೀಡಿದಿರಿ. ಆದರೆ ಈ ವಿತರಣಾ ವ್ಯವಸ್ಥೆ ಸಾರ್ವಜನಿಕರಿಗೆ ಪ್ರತಿನಿತ್ಯ ಅಗತ್ಯ ವಸ್ತುಗಳನ್ನು ವಿತರಣೆ ಮಾಡಬೇಕಾದ ಕ್ರಮ. ಇತ್ತೀಚೆಗೆ ಸರ್ಕಾರದವರು ಸಹಕಾರ ಸಂಘಗಳಿಗೆ ಕೊಟ್ಟರೆ ವಿತರಣಾ ವ್ಯವಸ್ಥೆ ಕುಸಿದು ಬೀಳುತ್ತದೆ ಎಂದು ಹೇಳಿ ಒಂದು ಕಾರ್ಯಕ್ರಮವನ್ನು ರೂಪಿಸಿದೆವು ನ್ಯಾಯ ಬೆಲೆ ಅಂಗಡಿ ಕೊಡುವಾಗ ಆದ್ಯತೆ ಮೇಲೆ ಸಹಕಾರ ಸಂಘಗಳಿಗೆ ಕೊಡಬೇಕೆಂದು ಆಧ್ಯತೆಯನ್ನು ಫಿಕ್ಸ್ ಮಾಡಿ ಸಹಕಾರ ಸಂಘಗಳಿಗೆ ಕೊಡುತ್ತೇವೆ. ಆ ಮಾತಿನ ಪ್ರಕಾರ ಒಟ್ಟು ಹೋಲ್‌ಸೇಲ್ ಏಜೆನ್ಸಿಗಳಿಂದ 273 ಫುಡ್ ಕಾರ್ಪೊರೇಷನ್ ಎಂದು ನಾವು ನಡೆಸುತ್ತಿದ್ದೇವೆ. ಈಗಾಗಲೇ 125 ಸಹಕಾರ ಸಂಘಗಳನ್ನು ನಡೆಸುತ್ತಿದ್ದೇವೆ. ಕೋಲಾರ ಜಿಲ್ಲೆಯಲ್ಲಿ ಬಾಗೇಪಲ್ಲಿಗೆ ಹೋಲ್‌ಸೇಲ್ ಏಜೆನ್ಸಿಯವರನ್ನು ಸಹಕಾರ ಸಂಘಗಳಿಗೆ ಕೊಡಲಾಗಿದೆ. ಗದಗ್,ಶೃಂಗೇರಿ, ಮತ್ತಿತರ ಕಡೆಗಳಲ್ಲಿ ಕೊಟ್ಟಿದ್ದೇವೆ. ಈ ಸಭೆಯಲ್ಲಿ ಏನು ತೀರ್ಮಾನವಾಗಿದೆ,

ಸಗಟು ವ್ಯಾಪಾರ ಕೇಂದ್ರವನ್ನು ಸಹಕಾರ ಸಂಘಗಳಿಗೆ ಆಧ್ಯತೆ ಮೇಲೆ ಕೊಡುವುದಕ್ಕೆ ಹೊರಟಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ವಿತರಣಾ ವ್ಯವಸ್ಥೆಯಲ್ಲಿ ಕೆಲವು ಲೋಪದೋಷಗಳಿವೆ. ಅದನ್ನು ಸರಿಪಡಿಸುವುದಕ್ಕೆ ನಾನು ಕಠಿಣ ಕ್ರಮಗಳನ್ನು ಹಾಕಿಕೊಂಡಿದ್ದೇನೆ. ಮೂರು ವಿಧದ ಕಾರ್ಡ್‌ಗಳು ಏನಿವೆ, ಒಂದು ಫೋಟೊ ಕಾರ್ಡ್, ಕೇಸರಿ ಕಾರ್ಡ್ ಮತ್ತು ಹಸಿರು ಕಾರ್ಡ್ ಹಸಿರು ಕಾರ್ಡ್ ಎಂದರೆ ಬಡತನ ರೇಖೆಯಿಂದ ಕೆಳಗಿರತಕ್ಕಂತವರಿಗೆ ಹಂಚುತ್ತೇವೆ. ನಮ್ಮ ರಾಜ್ಯದಲ್ಲಿ ಸುಮಾರು 43 ಲಕ್ಷ ಜನ ಸಂಖ್ಯೆ ಬಡತನ ರೇಖೆಯಿಂದ ಕೆಳಗಿದೆ. ಅಂದರೆ ನಾವು 63 ಲಕ್ಷ ಹಸಿರು ಕಾರ್ಡ್‌ಗಳನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು: ತಾವು ಈ ಸದನದ ಬಹಳ ಹಿರಿಯ ಸದಸ್ಯರು. ಶ್ರೀಮಾನ್ ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದೀರಿ. ಹೋದ ಸಲ ಈ ವಿಚಾರ ಪ್ರಸ್ತಾಪ ಮಾಡಿದಾಗ ಮತ್ತು ಇವತ್ತಿಗೂ ನಾವು ನಮ್ಮ ಅನುಭವದಲ್ಲಿ ನೋಡುವುದರಲ್ಲಿ ಪರಿಸ್ಥಿತಿ ಏನೂ ಸುಧಾರಿಸಿಲ್ಲ. ನಾನು ಇದನ್ನು ಬಹಳ ನೋವಿನಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಹೇಗೆ ನಿಮ್ಮ ಇಲಾಖೆಯನ್ನು ಚುರುಕುಗೊಳಿಸುತ್ತೀರಿ ನೋಡಿ. ನೀವು ಏನೇನು ಕ್ರಮ ತೆಗೆದುಕೊಂಡಿದ್ದೀರಿ, ಅದು ಎಕ್‌ಪ್ಲೇನ್ ಮಾಡುವುದು ಅಲ್ಲ, ಅಲ್ಲಿ ಆಗಿದೆ ಎಂದು ನಮಗೆ ಗೊತ್ತಾಗುವುದು ಯಾವಾಗ? ದಯಮಾಡಿ ಕೂತುಕೊಳ್ಳಿ ನಾನೂ ಒಬ್ಬ ಸದಸ್ಯ. ನಾನು ದಿನ ಬೆಳಗಾದರೆ ಜನರನ್ನು ಫೇಸ್ ಮಾಡಬೇಕು ನಾನು ಏನು ಹೇಳುತ್ತಿದ್ದೇನೆಂದರೆ, ಅಕ್ರಮ ಮಾರುವವನಿಗೆ ಹಿಡಿದುಕೊಂಡರೆ ಅವನು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾನೆ. ಜನರಿಗೆ ಅಕ್ಕಿ ಸಿಗುತ್ತಿಲ್ಲ, ಸೀಮೆಣ್ಣೆ ಸಿಗುವುದಿಲ್ಲ, ನಮ್ಮ ಜಿಲ್ಲಾಧಿಕಾರಿಗಳಿಗೆ ಕರೆದು ನಾನು ಹೇಳಿದ ಮೇಲೆ ನಮ್ಮ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ಎಲ್ಲಾ ಕಡೆ ಅವರು ಅಧಿಕಾರಿಗಳನ್ನು ಕರೆಸಿ ರೈಡ್ ಮಾಡುವ ಹಾಗೆ ಮಾಡಿಸಿದರು. ಆಗ ಈ ವ್ಯಾಪಾರಸ್ತರು ಸೇವೆ ಜನರಿಗೆ ಎತ್ತಿ ಕಟ್ಟಿದರು. ಎಮ್.ಎಲ್.ಎ. ಕೊಡಬಾರದು ಎಂದು ಹೇಳಿಕೊಟ್ಟಿದ್ದಾರೆಂದು ಜನರಿಗೆ ತಪ್ಪು ತಿಳುವಳಿಕೆ ನೀಡಿದರು. ನಾನು ಬಹಳ ಗೋಜಿಗೆ ಸಿಕ್ಕಿ ಹಾಕಿಕೊಂಡಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್: ನಮಗೂ ಎಲ್ಲಾ ಕಡೆಯಿಂದ ಸಾಕಷ್ಟು ದೂರುಗಳು ಬಂದಿವೆ. ಅದನ್ನು ಸರಿಪಡಿಸುವುದಕ್ಕೆ ಏನು ತೊಂದರೆ ಇದೆ ಎಂದು ಅವರು ಹೇಳುತ್ತಿದ್ದಾರೆ. ತಮ್ಮ ಸಲಹೆಯನ್ನು, ಸದನದ ಅನಿಸಿಕೆಯನ್ನು ಆದಷ್ಟು ಬೇಗ ಜಾರಿಗೆ ತರಬೇಕಾದರೆ ನಮ್ಮ ಮಂತ್ರಿಗಳ ಅಭಿಪ್ರಾಯಕ್ಕೆ ತಾವೆಲ್ಲರೂ ಸಹಕಾರ ಕೊಡಿ.

ಅಧ್ಯಕ್ಷರು: ಆದಷ್ಟು ಬೇಗ ಅನ್ನುವುದಕ್ಕೆ ಸಮಯ ನಿಗಧಿಯಾಗಿಲ್ಲದೆ ಇರುವುದರಿಂದ ಹೀಗೆ ಆಗುತ್ತಿದೆ. ಹೋದ ಅಧಿವೇಶನದಿಂದ ಈ ಅಧಿವೇಶನದವರೆಗೂ ಹಾಗೆ ಇದೆ. ಆದಷ್ಟು ಬೇಗ ಅನ್ನುವುದು ಬೇಗ ಆಗಲಿ ಎಂದು ಹೇಳುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸಗಟು ವ್ಯಾಪಾರವನ್ನು ಸೊಸೈಟಿಗಳಿಗೆ ಕೊಟ್ಟಿದ್ದೇವೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಯಾವುದೇ ಪ್ರದೇಶದಲ್ಲಿ ಸಗಟು ವ್ಯಾಪಾರವನ್ನು ಕೊಟ್ಟಿಲ್ಲ. ಎಲ್ಲಾ ದಲ್ಲಾಳಿಗಳಿಗೆ ಕೊಟ್ಟಿದ್ದಾರೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಎದ್ದು ನಿಂತು ಇದು ನನ್ನ ಗಮನಕ್ಕೆ ಬಂದಿದೆ. ನಾನು ಸದನದ ಎಲ್ಲಾ ಸದಸ್ಯರ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ, ಆದಷ್ಟು ಬೇಗ ಅದರ ಬಗ್ಗೆ ಕ್ರಮಕೈಗೊಳ್ಳುತ್ತೇನೆಂದು ಸಭಾ ನಾಯಕರು ಹೇಳಿರುವುದರಿಂದ ನಾವು ಸತ್ ಸಂಪ್ರದಾಯದಂತೆ ಅವರ ಮಾತಿಗೆ ಬೆಲೆ ಕೊಟ್ಟು ಈ ವಿಷಯವನ್ನು ಇಲ್ಲಿಗೆ ಮುಗಿಸಿ, ಬೇರೆ ವಿಷಯದ ಬಗ್ಗೆ ಮುಂದುವರೆಯೋಣ.

(ಉ) ಶಾಸಕರಿಗೆ ಕ್ಷೇತ್ರಾಭಿವೃದ್ಧಿ ಕಚೇರಿಯಿಂದ ವಾಹನ ಒದಗಿಸುವುದು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದು ಇಷ್ಟೇ, ಕರ್ನಾಟಕ ಸರ್ಕಾರದ ಸಚಿವಾಲಯವು, 1986ನೇ ಇಸವಿಯಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಶಾಸಕರುಗಳು ಕ್ಷೇತ್ರಾಭಿವೃದ್ಧಿ ಕಛೇರಿಯ ವಾಹನ (ಜೀಪ್) ನಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಹಾಗೂ ಇನ್ನಿತರ ಸ್ಥಳೀಯ ಅಧಿಕಾರಿಗಳೊಂದಿಗೆ ತಿಂಗಳಲ್ಲಿ ಕೆಲವು ದಿನಗಳ ಕಾಲ ಪ್ರವಾಸ ಮಾಡಲು ಅಂದರೆ ಹತ್ತು ದಿವಸಗಳ ಕಾಲ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಒಬ್ಬ ಶಾಸಕರ ಜೊತೆಯಲ್ಲಿ ಅವರು ಕ್ಷೇತ್ರದಲ್ಲಿ ಎಲ್ಲಿಗೆ ಹೋಗುತ್ತಾನೆ ಅಲ್ಲಿ ಹೋಗಿ ಅವರೊಂದಿಗೆ ಸಹಕರಿಸಿ ಆ ಕ್ಷೇತ್ರದ ಕೆಲಸಕಾರ್ಯಗಳ ಅಭಿವೃದ್ಧಿಯ ಬಗ್ಗೆ ಪರಿಶೀಲನೆ ಮಾಡಬೇಕೆಂದು ಸುತ್ತೋಲೆಯಾಗಿದೆ. ಆದರೆ ಇವೊತ್ತಿನ ಪರಿಸ್ಥಿತಿಯಲ್ಲಿ ಈ ಒಂದು ಸುತ್ತೋಲೆಗೆ ಒಂದು ಕಿಂಚಿತ್ತು, ಒಂದು ಕವಡೆಯಷ್ಟೂ ಬೆಲೆ ಇಲ್ಲ. ನಾನು ಇವತ್ತು ಇಲ್ಲಿ ಪಕ್ಷ ಭೇದ ಮರೆತು ಎಲ್ಲಾ ಶಾಸಕರ ಪರವಾಗಿ ಮಾತನಾಡುತ್ತಿದ್ದೇನೆ. ಅನೇಕ ಸಾರಿ ಈ ಸದನದಲ್ಲಿ ಬಹಳಷ್ಟು ಶಾಸಕರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇವೊತ್ತು ಏನಾಗಿದೆ ಎಂದರೆ ಕ್ಷೇತ್ರದ ಅಧಿಕಾರಿಗಳಿಗೆ ಅವರು ಇಚ್ಛಿಬಂದ ಹಾಗೆ ಒಂದು ರೀತಿ ವ್ಯತಿರಿಕ್ತವಾಗಿ ನಡೆಯುತ್ತಿದ್ದಾರೆ. ಶಾಸಕರುಗಳಿಗೆ ಒಂದು ಬೇರೆ ವ್ಯವಸ್ಥೆ, ಅಧಿಕಾರಿಗಳಿಗೆ ಒಂದು ರೀತಿ ಬೇರೆ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆ ಬಹಳ ಅಪಾಯಕಾರಿಯಾದ ಬೆಳವಣಿಗೆ. ನಾವು ಸಾರ್ವಜನಿಕವಾಗಿ ಕೆಲಸ ಮಾಡತಕ್ಕಂಥ ಶಾಸಕರುಗಳಿಗೆ ಅಲ್ಲಿಯ ಕ್ಷೇತ್ರದ ಅಧಿಕಾರಿಗಳು ಸಹಕಾರ ನೀಡಬೇಕು. ಒಂದು ತಿಂಗಳಿಗೆ ಹತ್ತು ದಿನಗಳ ಕಾಲ ಶಾಸಕರುಗಳ ಜೊತೆಯಲ್ಲಿ ಅವರು ಎಲ್ಲೆಲ್ಲಿ ಹೋಗುತ್ತಾರೆ ತಮ್ಮ ಕ್ಷೇತ್ರದಲ್ಲಿ ಏನು ಕೆಲಸ ಮಾಡುತ್ತಾರೆ ಅದಕ್ಕೆ ಸಹಕರಿಸಿ ಕ್ಷೇತ್ರದ ಅಧಿಕಾರಿಗಳು ಅವರ ಜೊತೆಗೆ ಹೋಗುವುದು ಮತ್ತು ಅವರಿಗೆ ಜೀಪ್ ಕೊಡಬೇಕು ಎನ್ನತಕ್ಕಂಥ ಸುತ್ತೋಲೆಯಲ್ಲಿ ನೀವೇ ಹೇಳಿದ್ದೀರಿ. ಅದಕ್ಕೆ ಇನ್ನೂ ಉನ್ನತವಾದ ತಿದ್ದುಪಡಿಗಳು ಆಗಬೇಕು. ಈ ಬಗ್ಗೆ ಆ ಕ್ಷೇತ್ರದ ಶಾಸಕರು ಯಾರೇ ಇರಲಿ ಅವರು ಯಾವುದೇ ಪಕ್ಷದವರಾಗಿರಲಿ, ಆದರೆ ಇತ್ತೀಚಿನ ದಿನಗಳಲ್ಲಿ ಏನಾಗಿದೆ ಕ್ಷೇತ್ರದ ಅಧಿಕಾರಿಗಳು ತಮಗೆ ಇಚ್ಛಿ ಬಂದ ಹಾಗೆ ವರ್ಗ ಮಾಡಿಸಿಕೊಂಡು ಬರಬಹುದು, ನಮಗೆ ಇಚ್ಛಿ ಬಂದ ಹಾಗೆ ಇರುತ್ತೇನೆ ಈ ಶಾಸಕರನ್ನು ಕಟ್ಟಿಕೊಂಡು ಏನಾಗಬೇಕು ಎನ್ನುವಂತೆ ಒಂದು ದೌರ್ಜನ್ಯದ ರೀತಿಯಲ್ಲಿ ನಡೆಯುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಒಬ್ಬ ಶಾಸಕನಿಗೆ ಅಲ್ಲಿರತಕ್ಕಂಥ ಕೆಲಸ, ಆ ಕ್ಷೇತ್ರದ ವ್ಯಾಪ್ತಿಗೆ ಬರತಕ್ಕಂಥ ಕೆಲಸ ಅವರು ಮಾಡಲೇಬೇಕು. ಅದಕ್ಕಾಗಿ ಅವರು ಅಧಿಕಾರಿಗಳು ಇರಲಿ ಬಿಡಲಿ ಕ್ಷೇತ್ರಕ್ಕೆ ಹೋಗುತ್ತಾರೆ. ನಾನು ಕೂಡ 224 ಕಿ.ಮೀ. ಇರತಕ್ಕಂಥ ನನ್ನ ಕ್ಷೇತ್ರಕ್ಕೆ ಪ್ರತಿ ಶನಿವಾರ ಹೋಗು ಭಾನುವಾರ ಬರತಕ್ಕಂಥದ್ದನ್ನು